# ಕತ್ತೆ-ಎತ್ತು!



ಒಂದು ಸಣ್ಣ ಹಳ್ಳಿಯಿತ್ತು, ಅದಕ್ಕೆ ಒಂದು ಹೆಬ್ಬಾಗಿಲಿತ್ತು. ಹೆಬ್ಬಾಗಿಲ ಹೊರಗೆ ದಾರಿಯ ಎಡಕ್ಕೆ ಒಂದು ಕಾಡುಗಲ್ಲನ್ನು ಒಂದು ಗುಂಡಿಯ ಮೇಲೆ ಮುಚ್ಚಿದ್ದರು. ಆ ಕಾಡುಗಲ್ಲಿನ ಮೇಲೆ ಒಂದು ಕತ್ತೆ ಹಾಗೂ ಒಂದು ಎತ್ತಿನ ಚಿತ್ರವನ್ನು ಕಟೆದಿದ್ದರು.

ಊರ ಜನರಿಗೆ ಅದು ಏನೆಂದು ಗೊತ್ತಿರಲಿಲ್ಲ. ಯಾರೂ ಅದರ ಗೋಜಿಗೆ ಹೋಗಿರಲಿಲ್ಲ. ಆ ಹಳ್ಳಿಯಲ್ಲಿ ಕನ್ನಡ ಶಾಲೆ ಪ್ರಾರಂಭವಾಯಿತು. ಒಂದನೇ ವರ್ಗದಿಂದ ನಾಲ್ಕನೇ ವರ್ಗದವರೆಗೆ ಶಾಲೆ ಬೆಳೆಯಿತು.

ನಾಲ್ಕನೇ ವರ್ಗದ ಒಬ್ಬ ಚಾಣಾಕ್ಷ ಬಾಲಕ ಗುಂಡಿಯ ಮೇಲಿನ ಕತ್ತೆ—ಎತ್ತಿನ ಚಿತ್ರದ ರಹಸ್ಯ ಏನಿರಬಹುದು? ಎಂಬುದನ್ನು ತಿಳಿಯಲು ನಿರ್ಧರಿಸಿದನು.  ಗೆಳೆಯರನ್ನೆಲ್ಲ ಸಲಿಕೆ, ಹಾರೆ, ಗುದ್ದಲಿಗಳನ್ನು ತರಲು ಅವರ ಮನೆಗೆ ಕಳಿಸಿದನು. ಅವರು ಅವುಗಳನ್ನು ತಂದರು. ಹಾರೆ ಗುದ್ದಲಿಗಳಿಂದ ಮೇಲಿನ ಕತ್ತೆ—ಎತ್ತಿನ ಚಿತ್ರ ಕಟೆದ ಕಾಡುಗಲ್ಲನ್ನು ಅಗೆದು ತೆರೆದರು. ಸ್ವಲ್ಪ ಮಣ್ಣನ್ನು ಹಡ್ಡಿ ತೆಗೆದರು. ಗುಂಡಿಯಲ್ಲಿ ಒಂದು ಮುಚ್ಚಳ ಮುಚ್ಚಿದ ಮಣ್ಣಿನ ಗಡಿಗೆ ಸಿಕ್ಕಿತು. ಅದರಲ್ಲಿ ಬೆಳ್ಳಿ ಬಂಗಾರದ ನಾಣ್ಯಗಳಿದ್ದವು. ಚಾಣಾಕ್ಷ ಬಾಲಕ ಹಾಗೂ ಗೆಳೆಯರು ಹಳ್ಳಿಯ ಗೌಡ ಕುಲಕರ್ಣಿಯವರಿಗೆ ಬೆಳ್ಳಿ ಬಂಗಾರಗಳ ನಾಣ್ಯಗಳಿಂದ ತುಂಬಿದ ಗಡಿಗೆಯನ್ನು ಕೊಟ್ಟರು. ಗೌಡ ಕುಲಕರ್ಣಿ ಮಕ್ಕಳ ಪ್ರಾಮಾಣಿಕತೆ ಮೆಚ್ಚಿದರು. ಎಲ್ಲ ಮಕ್ಕಳಿಗೆ ಬಹುಮಾನ ಕೊಟ್ಟರು. ನಾಲ್ಕನೇ ವರ್ಗದ ಚಾಣಾಕ್ಷ ಬಾಲಕನಿಗೆ ವಿಶೇಷವಾದ ಬಹುಮಾನವಿತ್ತು ಸನ್ಮಾನಿಸಿದರು.

ಗೌಡನು ಎಲ್ಲ ಮಕ್ಕಳನ್ನು ಕುರಿತು, 'ಮಕ್ಕಳೆ, ಕತ್ತೆ—ಎತ್ತುಗಳ ಚಿತ್ರದ ಮರ್ಮವೇನು? ಹೇಳಿರಿ' ಎಂದನು. ಚಾಣಾಕ್ಷ ಬಾಲಕನು, 'ಕತ್ತೆಯಂಥ ಮೂರ್ಖರೆ, ಗುಂಡಿಯ ಮೇಲಿನ ಕಲ್ಲನ್ನು ಎತ್ತಿರಿ, ಏನಾದರೂ ಸಂಪತ್ತು ಸಿಗಬಹುದು. ನಾವು ಆಲಸಿಗಳಾಗದೇ, ಪರಿಶ್ರಮಪಡಬೇಕು. ಆಗ ತಕ್ಕ ಪ್ರತಿಫಲ ಎಂಬ ಸಂಪತ್ತು ಸಿಗುತ್ತದೆ' ಎಂಬ ತನ್ನ ವಿಚಾರ ವಿವರಿಸಿದನು.

ಗೌಡ ಕುಲಕರ್ಣಿಯವರು ಹುಡುಗರು ನೀಡಿದ ಸಂಪತ್ತನ್ನು ಉತ್ತಮವಾದ ಶಾಲೆಯ ಕಟ್ಟಡ ಕಟ್ಟಲು ಉಪಯೋಗಿಸಿದರು. ಉಪಯುಕ್ತ ಪೀಠೋಪಕರಣ ಹಾಗೂ ಪಾಠೋಪಕರಣಗಳನ್ನು ಒದಗಿಸಿಕೊಟ್ಟರು.

**(ಆಧಾರ) ಅಣ್ಣಾಜಿ ಪಡತಾರೆ,**
**ಮಹಾಲಿಂಗಪುರ**

---




ಪ್ರಾಣಿ– ಪಕ್ಷಿ ಗುಂಪು
ಕಾಡಿನಲ್ಲಿ ಸಭೆಯ ಸೇರಿತು
ತಮ್ಮ ನೋವು– ನಲಿವಿನ
ಚರ್ಚೆ ನಡೆಸಿತು

ಸಿಂಹ ರಾಜ ಗತ್ತಿನಿಂದ
ಗುಡ್ಡ ಏರಿತು
ಗಜರಾಜ ಗೈರತ್ತಿನಿಂದ
ದಿಬ್ಬ ಹತ್ತಿತು

ಜಿಂಕೆ ಕಡವೆ ಕೋತಿ ಕೋಣ
ಸಾಲು ಸಾಲು ಬಂದವು
ಕರಡಿ ಚಿರತೆ ಹುಲಿ ತೋಳ ನರಿ
ಸುತ್ತ ಬಳಸಿ ನಿಂದವು

ಆಹಾರಕ್ಕೆ ಹಾಹಾಕಾರ
ಕುಡಿವ ನೀರಿಗೂ ತತ್ವಾರ
ಜೀವಕ್ಕಂತೂ ಸಂಚಕಾರ
ಹುಡುಕಿರೊಂದು ಪರಿಹಾರ

ಮನುಜ ಬಂದ ದುರಾಸೆಯಿಂದ
ವನವನೆಲ್ಲ ಸಂಹರಿಸಿ ನಿಂದ
ಮಳೆಯು ಮುಗಿಲ ಸೇರಿತು
ಬರದ ಬೇಗೆ ಸುಡುತ ಬಂದಿತು

ಅನ್ನ ನೀರು ಸಿಗುತ್ತಿಲ್ಲ
ನಾವು ಏನು ಮಾಡಲಿ ?
ಊರು ಕೇರಿ ವಸತಿಯಡೆಗೆ
ನುಗ್ಗಿ ದಾಳಿ ಮಾಡಲೇ ?

ಬದುಕಲು ಇಲ್ಲಿ ನಿನ್ನ ಹಾಗೆ
ನಮಗೂ  ಪೂರಾ ಹಕ್ಕಿದೆ
ಅತ್ಯಾಚಾರ ದಬ್ಬಾಳಿಕೆಗೆ ನೀ
ಅಂತ್ಯ ಹಾಡಬೇಕಿದೆ

ನಡೆಯುತಿರೆ ಹೀಗೆ ಮುಂದೆ
ಎಲ್ಲೂ ಏನೂ ಉಳಿಯದು
ನೀನೂ  ಸೇರಿದಂತೆ ಸಕಲ
ಜೀವರಾಶಿ ಅಳಿವುದು !

**-ಚಂದ್ರೇಗೌಡ ನಾರಮ್ನಳ್ಳಿ**